ಮೂಲತಃ ಮುಖೇಡಿಯಾದ ನಾನು ಮಾತೇ ಬಂಡವಾಳವಾಗಿರುವ ಶಿಕ್ಷಕ ವೃತ್ತಿಗೆ ಅದೆಂತು ತಪ್ಪಿ ಬಂದೆನೊ ಅರಿಯೆ. ಈಗಲೂ ನನಗೆ ಓದು ಬರೆಹದಲ್ಲಿ ಸಿಗುವ ಖುಶಿ ಮಾತಾಡುವುದರಲ್ಲಿಲ್ಲ. ಇದಕ್ಕೆ ಗುಪ್ತ ಕಾರಣವಿದೆ—ನಾನು ಮಾಡುವ ಹತ್ತು ಭಾಷಣಗಳಲ್ಲಿ ಚೆನ್ನಾಗುವುದು ಒಂದೊ ಎರಡೊ. ಒಳ್ಳೆಯ ವಾಗ್ಮಿಗಳು ಜತೆಗಿದ್ದರಂತೂ ಮೂರನೇ ಸ್ಥಾನ ಗ್ಯಾರಂಟಿ. ಹೀಗಾಗಿ ಭಾಷಣದ ತಯಾರಿಗಿಂತ ಹೆಚ್ಚಿನ ಸಮಯ ಭಾಷಣ ಸರಿಯಾಗಲಿಲ್ಲ ಎಂದು ಪರಿತಪಿಸುವುದಕ್ಕೇ ಹೋಗುತ್ತದೆ. ಭಾಷಣ ಕೆಟ್ಟಾಗ ತಲೆ ತಪ್ಪಿಸಿಕೊಂಡು ಓಡಾಡುವಂತಾಗುತ್ತದೆ. 'ಎಷ್ಟೊಳ್ಳೆಯ ಸಭೆ. ಸಿದ್ಧತೆಯಿಲ್ಲದೆ ಭಾಷಣ ಮಾಡಿದೆ' ಎಂಬ ವಿಷಾದಯೋಗ ಕಾಡುತ್ತದೆ. ಸಿದ್ಧತೆಯಿದ್ದಾಗ ಭಾಷಣ ಚೆಂದವಾಗುತ್ತದೆ ಎಂದು ಖಾತ್ರಿಯೇನಿಲ್ಲ. ಎಂತಲೇ ಕೈಯಲ್ಲಿ ಕಾಗದದ ಚೂರಿಲ್ಲದೆ ಜನರ ಕಣ್ಣಲ್ಲಿ ಕಣ್ಣಿಟ್ಟು ಮೈಕಿನ ಮುಂದೆಯೇ ಹೊಸಹೊಸ ವಿಚಾರ ಹೊಳೆಸಿಕೊಂಡು ಮಾತಾಡುವವರನ್ನು ನೋಡಿದರೆ ನನಗೆ ಹೊಟ್ಟೆಯೊಳಗೆ ಕೈಹಾಕಿ ತಿರುವಿದಂತಾಗುತ್ತದೆ. ಕೆಲವು ಖೂಳರು ಸೊಗಸಾದ ಮಾತುಗಾರಿಕೆ ಜತೆಗೆ ಹಾಡುವುದನ್ನೂ ತಮಾಶೆಯಿಂದ ನಗಿಸುವುದನ್ನೂ ಕಲಿತಿದ್ದಾರೆ. ಅಂಥವರಿದ್ದರಂತೂ ನನ್ನ ಭಾಷಣದ ಪ್ರಭಾವ ಸೋಪು ಹಾಕಿ ತೊಳೆದಂತೆ.

